ಎಂಟುನೂರು ವರ್ಷಗಳಾದರೂ ಇಂದಿಗೂ ಹೊಚ್ಚಹೊಸದೆಂಬಂತೆ ನಮ್ಮನ್ನು ತಟ್ಟುವ ಪಠ್ಯ 'ಹರಿಶ್ಚಂದ್ರ ಕಾವ್ಯ'. ಕವಿ ಇಟ್ಟ ಹೆಸರು 'ಹರಿಶ್ಚಂದ್ರ ಚಾರಿತ್ರ' ಎಂದಾದರೂ ಜನಮನದಲ್ಲಿ 'ಹರಿಶ್ಚಂದ್ರ ಕಾವ್ಯ' ಎಂದೇ ಉಳಿದಿರುವ ಕೃತಿಯಿದು. ಪಂಪ ರನ್ನರದು ಓದುಗಬ್ಬವಾದರೆ ಹರಿಹರ ರಾಘವಾಂಕರದು ಹಾಡುಗಬ್ಬ; ಮೌಖಿಕ ಸಂಪ್ರದಾಯದ ಬಳುವಳಿ. ಈ ಕಾರಣದಿಂದಲೇ ಇವರು ಅರಮನೆ – ಗುರುಮನೆಗಳಲ್ಲಿ ಮಾತ್ರ ಜೀವಿಸಿದ್ದ ಕನ್ನಡ ಕಾವ್ಯವನ್ನು ಸಾಮಾನ್ಯ ಜನರ ಮನೆಮನೆಗಳಲ್ಲಿ ಅರಳುವಂತೆ ಮಾಡಲು ಸಾಧ್ಯವಾದದ್ದು. ಅದರಲ್ಲೂ ವಾರ್ಧಕ ಷಟ್ಪದಿಯ ಎಲ್ಲ ಬಿಗಿಯನ್ನು ಕಾಪಾಡಿಕೊಂಡು, ಆ ಮಿತಿಯೊಳಗೇ ಸಮರ್ಥವಾದ, ಲವಲವಿಕೆಯ ಕಾವ್ಯ ರಚಿಸಿದ್ದು ರಾಘವಾಂಕನ ಹೆಗ್ಗಳಿಕೆ.

ರಾಘವಾಂಕನ ಭಾಷಿಕ ಬತ್ತಳಿಕೆಯಲ್ಲಿರುವ ರಾಮಬಾಣ (ಅಲ್ಲಲ್ಲ 'ಶಿವನಬಾಣ' ಎಂದಾಗಬೇಕೇನೊ. ಏಕೆಂದರೆ ಶಿವನನ್ನು ಬಿಟ್ಟು 'ಪರರ ದೈವವ ನುತಿಸದಿಪ್ಪ ಭಾಷೆ' ನೀಡಿರುವ ಶಿವಭಕ್ತನೀತ!) ಎಂದರೆ ಪುನರುಕ್ತಿ. ಪುನರುಕ್ತಿ ಕನ್ನಡಕ್ಕೆ, ಅದರಲ್ಲೂ ಕನ್ನಡದ ಆಡುಭಾಷೆಗೆ ವಿಶಿಷ್ಟವಾಗಿ ದತ್ತವಾಗಿರುವ ಗುಣ. ಭಾಷೆಯ ಬೇರೆಬೇರೆ ಸ್ತರಗಳಾದ ಸ್ವರ, ಪದ, ವಾಕ್ಯ, ಘಟಕ ಮುಂತಾದ ನೆಲೆಗಳಲ್ಲಿ ಪುನರುಕ್ತಿಯನ್ನು ಅತ್ಯಂತ ಕ್ರಿಯಾತ್ಮಕವಾಗಿ, ಸೂಕ್ಷ್ಮವಾಗಿ, ಸೃಷ್ಟಿಶೀಲವಾಗಿ ಬಳಸಿಕೊಂಡ ಕವಿ ರಾಘವಾಂಕ. ಇದಕ್ಕೆ ಕಾವ್ಯದ ಉದ್ದಕ್ಕೂ ನೂರಾರು ದೃಷ್ಟಾಂತಗಳಿವೆ.

ಭುಗಿಭುಗಿಲ್ ಭುಗಿಭುಗಿಲ್ ಛಿಳಿಛಿಳಿಲ್ ಛಿಟಿಛಿಟಿಲ್
ಧಗಧಗಿಲ್ ಧಗಧಗಿಲ್ ಘುರಿಘುರಿಲ್ ಘುರಿಘುರಿಲ್
ಧಗಧಗಂ ಧಗಧಗಂ ಧಗಧಗಿಲ್ ಛಿಮಿಛಿಮಿಲ್ ಛುರಿಛುರಿಲ್ ಛಟ ಛಟೆಂದು
ಒಗೆದು ಧಂಧಗಧಗಧಗಂ ಘುಳುಘುಳೆಂದುಬ್ಬಿ
ನೆಗೆದು ದಳ್ಳುರಿ ಬಳ್ಳಿವರಿದು ಕತ್ತಲಿಸಿ ಕ
ರ್ಬೊಗೆ ಮೀಱಿ ತೋಱಿ ಕೆಂಗಿಡಿಗೆದಱಿ ದಾವಾಗ್ನಿ ಮುತ್ತಿತು ನಾಲ್ದೆಸೆಯನು

ರಾಜ್ಯ ಕೋಶ ಕಳೆದುಕೊಂಡು ಹರಿಶ್ಚಂದ್ರನ ಕುಟುಂಬ ಕಾಶಿಗೆ ಹೋಗುವ ದಾರಿಯಲ್ಲಿ, ಅವರನ್ನು ಕಾಣಲೆಂದೇ ವಿಶ್ವಾಮಿತ್ರ ಸೃಷ್ಟಿಸಿದ ಕಾಳ್ಗಿಚ್ಚಿನ ಈ ವರ್ಣನೆ ನೋಡಿ. ಇಲ್ಲಿಯ ಅನುಕರಣ ಶಬ್ದಗಳು, ಅವುಗಳ ಪುನರುಕ್ತಿ, ಆ ದಳ್ಳುರಿಯ ಬೇಗೆ ಓದುಗರಿಗೆ ತಟ್ಟುವ ಅನುಭವವನ್ನು ಮೂಡಿಸುತ್ತದೆ.

ಸಲೆ ಶಿವಮಯಂ ಶಿವಮಯಂ ಶಿವಮಯಂ ಶಿವಮಯಂ ಸಮು
ಜ್ವಲ ಶಿಖಿಮಯಂ ಶಿಖಿಮಯಂ ಶಿಖಿಮಯಂ ನಿರಾ
ಕುಲ ಶುಕಮಯಂ ಶುಕಮಯಂ ಶುಕಮಯಂ ಗಿರಿಯ
ಸಾನುವಿಂದೊಸರ್ದು ಪರಿವ
ಜಲ ಹರಿಮಯಂ ಹರಿಮಯಂ ಹರಿಮಯಂ ಮೃಗಾ
ಕುಲ ಮಧುಮಯಂ ಮಧುಮಯಂ ಮಧುಮಯಂ ಶಬರ
ಬಲ ಬಾಣಮಯ ಬಾಣಮಯ ಬಾಣಮಯವಾಗಿ ಕಾನನಂ
ಕಣ್ಗೆಸೆದುದು